ಜಾಹೀರಾತು

# ಸಂತಾನಕ್ಕಾಗಿ ಅಂಡಾಣು ದಾನ



ಯಾವುದೇ ಮಹಿಳೆ ನೈಸರ್ಗಿಕವಾಗಿ ತಾಯಿಯಾಗ ಬೇಕೆಂದರೆ, ಆಕೆಯ ಅಂಡಾಶಯದಲ್ಲಿ ಉತ್ಪತ್ತಿಯಾಗುವ ಅಂಡಾಣು ಸಂಪೂರ್ಣ ಫಲವತ್ತತೆಯ ಗುಣ ಹೊಂದಿರಬೇಕು. ಒಮ್ಮೊಮ್ಮೆ ಆಕೆಯ ಅಂಡಾಣು ಒಳ್ಳೆಯ ಗುಣಮಟ್ಟದ್ದಾಗಿದ್ದರೂ ಆಕೆಯ ದೇಹದಲ್ಲಿ ಆವರಿಸಿಕೊಂಡಿರುವ ಕೆಲವೊಂದು ರೋಗಗಳ ಕಾರಣದಿಂದಾಗಿ ಆಕೆ ತಾಯಿಯಾಗುವ ಸುಖದಿಂದ ವಂಚಿತಳಾಗಬೇಕಾಗುತ್ತದೆ.

ಇಂತಹ ಸಂದರ್ಭದಲ್ಲಿ ಬೇರೆ ಮಹಿಳೆ ಅಂದರೆ ದಾನಿಯಿಂದ ಪಡೆದ ಅಂಡಾಣು ಆಕೆಗೆ ಗರ್ಭಿಣಿಯಾಗಲು ನೆರವಾಗಬಹುದು.

ಅಂಡಾಣುವನ್ನು ದಾನವಾಗಿ ಪಡೆದು, ಅದನ್ನು ಪುರುಷನ ವೀರ್ಯಾಣುವಿನ ಜೊತೆ, ಸಮ್ಮಿಳಿತಗೊಳಿಸಿ 'ಗರ್ಭಧಾರಣೆ' ಮಾಡುವ ಪ್ರಕ್ರಿಯೆ 'ಇನ್‌ವಿಟ್ರೊ ಫರ್ಟಿಲೈಸೇಶನ್ ಟೆಕ್ನಿಕ್' ಅಂದರೆ 'ಐವಿಎಫ್' ಮುಖಾಂತರ ನಡೆಯುತ್ತದೆ.

**ಅಂಡಾಣು ದಾನ ಯಾರು ಪಡೆಯಬಹುದು?**

40ರ ಅಸುಪಾಸಿನ ಮಹಿಳೆ ಮಗು ಪಡೆಯಲು ಯಶಸ್ವಿಯಾಗದೇ ಇದ್ದಲ್ಲಿ ಆಕೆಯ ಅಂಡಾಣುಗಳ ಶಕ್ತಿ ಭಾಗಶಃ ಅಥವಾ ಸಂಪೂರ್ಣ ಕುಗ್ಗಿರಬಹುದು.

ಕೆಲವು ಮಹಿಳೆಯರಲ್ಲಿ ಗೆಡ್ಡೆಗಳ ಸಮಸ್ಯೆಯಿಂದಾಗಿ ಎರಡೂ ಅಂಡಾಶಯುಗಳನ್ನು ತೆಗೆದು ಹಾಕಲಾಗಿರುತ್ತದೆ.

ಎಂಡೊ ಮೆಟ್ರಿಯೋಸಿಸ್ ಅಥವಾ ಪ್ರಿಮೆಚ್ಯೂರ್ ಓವೇರಿಯನ್ ಫೆಲ್ಯೂರ್‌ನಿಂದಾಗಿಯೂ ಅಂಡಾಶಯ ತನ್ನ ಕಾರ್ಯಚಟುವಟಿಕೆ ಸ್ಥಗಿತಗೊಳಿಸುತ್ತದೆ.

ಕ್ಯಾನ್ಸರ್‌ಗ್ರಸ್ತ ಮಹಿಳೆಗೆ ರೇಡಿಯೊಥೆರಪಿ, ಕೀಮೊಥೆರಪಿ ಕೊಡಲಾಗುತ್ತದೆ. ಅದರಿಂದಾಗಿಯೂ ಅಂಡಾಶಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ.

ಮಹಿಳೆಗೆ ತೀವ್ರ ಸ್ವರೂಪದ ಕಾಯಿಲೆಗಳು (ನರಮಂಡಲದ ರೋಗಗಳು, ಹೃದ್ರೋಗ) ಇದ್ದಲ್ಲಿ ಆಕೆಯ ಅಂಡಾಶಯದಲ್ಲಿ ಉತ್ತಮ ಗುಣಮಟ್ಟದ ಅಂಡಾಣುಗಳು ಉತ್ಪತ್ತಿಯಾಗುತ್ತಿದ್ದರೂ ಕೂಡ ಆಕೆ ಗರ್ಭ ಧರಿಸಿದರೆ, ಆ ರೋಗಗಳು ಅನುವಂಶಿಕವಾಗಿ ತಾಯಿಯಿಂದ ಮಗುವಿಗೂ ಬರಬಹುದು.

ಈ ಮೇಲ್ಕಂಡ ಯಾವುದೇ ಸಮಸ್ಯೆಗಳಿಂದ ಮಗು ಪಡೆಯಲು ಆಗದೇ ಇರುವ ಮಹಿಳೆಯರು ಬೇರೆ ಮಹಿಳೆಯರಿಂದ ಅಂಡಾಣುವನ್ನು ದಾನವಾಗಿ ಪಡೆದು ಗರ್ಭ ಧರಿಸಬಹುದು. ಇದು ಅತ್ಯಂತ ಸುರಕ್ಷಿತ ವಿಧಾನ.

**ಯಾರು ಅಂಡಾಣು ದಾನ ಮಾಡಬಹುದು?**

ಸಾಮಾನ್ಯವಾಗಿ ಸಂಬಂಧಿಕರೇ ಅಂಡಾಣು ದಾನ ನೀಡಬೇಕೆಂದು ಹೇಳಲಾಗುತ್ತದೆ, ಅದು ತಪ್ಪು ಕಲ್ಪನೆ, ಬೇರೆ ಮಹಿಳೆಯರಿಂದಲೂ ಅಂಡಾಣುವನ್ನು ದಾನವಾಗಿ ಸ್ವೀಕರಿಸಬಹುದು.

ಅಂಡಾಣುವನ್ನು ದಾನವಾಗಿ ನೀಡುವ ಮಹಿಳೆಯ ವಯಸ್ಸು 20 ರಿಂದ 30ರ ನಡುವೆ ಇರಬೇಕು.

ಆಕೆ ಪರಿಪೂರ್ಣ ಆರೋಗ್ಯವಂತಳಾಗಿರಬೇಕು. ಜೊತೆಗೆ ವಿವಾಹಿತಳಾಗಿರಬೇಕು.

ಅಂಡಾಣು ದಾನ ನೀಡುವುದಾಗಿ ಮುಂದೆ ಬರುವ ಮಹಿಳೆ ಒಂದು ಮಗುವಿನ ತಾಯಿ ಕೂಡ ಆಗಿರಬೇಕು. ಆಕೆಯ ಅಂಡಾಶಯದಲ್ಲಿ ಉತ್ಪತ್ತಿಯಾಗುವ ಅಂಡಾಣು ಸಂಪೂರ್ಣ ಫಲವತ್ತತೆಯ ಗುಣ ಹೊಂದಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಈ ಷರತ್ತು ಹಾಕಲಾಗುತ್ತದೆ.

ಅಂಡಾಣು ದಾನಿ ಮಹಿಳೆ ಇದನ್ನು ವ್ಯಾಪಾರಿ ಉದ್ದೇಶಕ್ಕಾಗಿ ಮಾಡಬಾರದು.

**ಈ ಪ್ರಕ್ರಿಯೆ ಹೇಗೆ ನಡೆಯುತ್ತದೆ?**

ಅಂಡಾಣುದಾನಿ ಮಹಿಳೆ ಮತ್ತು ಅದನ್ನು ಸ್ವೀಕರಿಸುವ ಮಹಿಳೆಯ ಚಿಕಿತ್ಸಾ ವಿಧಾನಗಳು ಏಕಕಾಲಕ್ಕೆ ನಡೆಯುತ್ತವೆ.

ಇಬ್ಬರೂ ಮಹಿಳೆಯರ ಮುಟ್ಟಾಗುವ ದಿನಗಳನ್ನು ಕಂಡುಕೊಂಡು, ಅವು ಬೇರೆ ಬೇರೆ ದಿನಾಂಕಗಳಗಿದ್ದಲ್ಲಿ, ಋತುಚಕ್ರ ಒಂದೇ ಸಲಕ್ಕೆ ಬರುವಂತೆ ಚಿಕಿತ್ಸೆ ನೀಡಲಾಗುತ್ತದೆ.

ಅಂಡಾಣು ದಾನಿ ಮಹಿಳೆಯ ಅಂಡಾಶಯದಲ್ಲಿ ಅಂಡಾಣು ಪರಿಪಕ್ವಗೊಳ್ಳಲು ಆಕೆಗೆ 10 ರಿಂದ 12 ದಿನಗಳವರೆಗೆ ಚುಚ್ಚುಮದ್ದು ಕೊಡಲಾಗುತ್ತದೆ.

ಅದೇ ಸಮಯದಲ್ಲಿ ಅಂಡಾಣು ಸ್ವೀಕರಿಸುವ ಮಹಿಳೆಗೆ 2–3 ದಿನಗಳಿಗೊಮ್ಮೆ ಸ್ಕ್ಯಾನಿಂಗ್ ಹಾಗೂ ರಕ್ತಪರೀಕ್ಷೆ ಮಾಡಿ ಎಲ್ಲ ಪ್ರಕ್ರಿಯೆಗಳು ಸಮರ್ಪಕವಾಗಿ ನಡೆದಿವೆಯೇ ಎಂಬುದನ್ನು ಕಂಡುಕೊಳ್ಳಲಾಗುತ್ತದೆ.

ದಾನಿ ಮಹಿಳೆಯ ಅಂಡಾಶಯದಲ್ಲಿ ಅಂಡಾಣು ಪರಿಪಕ್ವಗೊಂಡಿದ್ದು ಖಚಿತವಾಗುತ್ತಿದ್ದಂತೆಯೇ ಅದನನು ಹೊರತೆಗೆದು ಮಹಿಳೆಯ ಗಂಡನ ವೀರ್ಯಾಣುವಿನ ಜೊತೆ ಮಿಲನಗೊಳಿಸಿ, ಗರ್ಭಪ್ರಕ್ರಿಯೆ ನಡೆಸಲಾಗುತ್ತದೆ. ಬಳಿಕ 3–4 ದಿನಗಳ ಕಾಲ ಪ್ರಯೋಗಾಲಯದಲ್ಲಿ ಅದನ್ನು ಬೆಳಸಿ ನಂತರ ಮಹಿಳೆಯ ಗರ್ಭಾಶಯದಲ್ಲಿ ಸ್ಥಳಾಂತರಗೊಳಿಸಲಾಗುತ್ತದೆ.

ಭ್ರೂಣವನ್ನು ಗರ್ಭಾಶಯಕ್ಕೆ ಸೇರ್ಪಡೆ ಮಾಡಿದ ಬಳಿಕ, ಆ ಮಹಿಳೆಗೆ ಔಷಧಿ–ಚುಚ್ಚುಮದ್ದು ಕೊಡುತ್ತಲೇ ಇರಬೇಕಾಗುತ್ತದೆ.

ಅವಳ ಗರ್ಭಾಶಯ ಆ ಭ್ರೂಣವನ್ನು ಸ್ವೀಕರಿಸಿದೆಯೊ, ಇಲ್ಲವೊ ಎನ್ನುವುದು 15 ದಿನಗಳಲ್ಲಿಯೇ ಖಚಿತವಾಗುತ್ತದೆ.

ಒಂದು ವೇಳೆ ಗರ್ಭ ನಿಲ್ಲದಿದ್ದಲ್ಲಿ ಮುಂಬರುವ ತಿಂಗಳಲ್ಲಿ ಈ ಪ್ರಯೋಗವನ್ನು ಪುನಃ ಮುಂದುವರಿಸಲಾಗುತ್ತದೆ.

ಈ ವಿಧಾನದ ಯಶಸ್ಸಿನ ಪ್ರಮಾಣ ಶೇ 60 ರಷ್ಟು ಇದೆ.

**– ಡಾ|| ಬಿ. ರಮೇಶ್**

## ಅಂಡಾಣು ದಾನಕ್ಕಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:


## ಆಲ್ಟಿಯಸ್ ಹಾಸ್ಪಿಟಲ್

( Unit of Dr. Ramesh Hospital)

ಹೈಟೆಕ್ ಲ್ಯಾಪ್ರೋಸ್ಕೊಪಿ & ಗೈನೊಕಾಲಜಿ ಹಾಸ್ಪಿಟಲ್

**ರಾಜಾಜಿನಗರ:**
ನಂ.6/63, 59ನೇ ಅಡ್ಡರಸ್ತೆ, 4ನೇ ಬ್ಲಾಕ್,
ರಾಜಾಜಿನಗರ ಎಂಟ್ರೆನ್ಸ್, ಎಂ.ಇ.ಐ. ಪಾಲಿಟೆಕ್ನಿಕ್ ಎದುರು,
ರಾಮಮಂದಿರ ಹತ್ತಿರ, ಬೆಂಗಳೂರು–10.
ಫೋ: 080-23151873 Mob: 9900031842

**ರಾಜರಾಜೇಶ್ವರಿನಗರ:**
ನಂ.915, 1ನೇ ಮಹಡಿ, ಧನುಷ್ ಪ್ಲಾಜಾ,
ಐಡಿಯಲ್ ಹೋಮ್ಸ್ ಟೌನ್‌ಷಿಪ್, ಗೋಪಾಲನ್‌ಮಾಲ್ ಹತ್ತಿರ,
ರಾಜರಾಜೇಶ್ವರಿನಗರ, ಬೆಂಗಳೂರು–98.
ಫೋ: 080-28606789 Mob: 9663311128

E-mail: endoram2006@yahoo.in, Website: www.laparoscopicsurgeries.com